ಶ್ರೀ ವಾಟಾಳ್ ನಾಗರಾಜು : ತೀರ್ಮ ಯಾವಾಗ ಬರೆದಿದ್ದು ಹೇಳಿ ಸ್ವಾಮಿ? ಇದು ಯಾವಾಗ ಬರೆದಿದ್ದು? ಯಾರು ಬರೆದುಕೊಟ್ಟರು?

ಅಧ್ಯಕ್ಷರು : ಈ ದಿನ ಮಾನ್ಯ ಸಚಿವರಾದ ಶ್ರೀ ಶಶಿಕಾಂತ ಅಣ್ಣಪ್ಪ ನಾಯಕ್‌ರವರು ಶಾಸಕರ ಗೌರವಾರ್ಥ ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ, ಎಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ತೀರ್ಮ ಯಾವಾಗ ಬರೆದಿದ್ದು ಹೇಳಿ ಎಂದರೆ ಹೇಳುವುದಿಲ್ಲವಲ್ಲಾ.

ಅಧ್ಯಕ್ಷರು : ಈಗ ಸದನವನ್ನು 4–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ತನ್ನ ಕಲಾಪವನ್ನು 3–10ಕ್ಕೆ ಮುಂದೂಡಲ್ಪಟ್ಟು ಮತ್ತೆ ಸಂಜೆ 4–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಅ) ಅಧ್ಯಕ್ಷರ ತೀರ್ಮ

ಅಧ್ಯಕ್ಷರು : ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಬಸವರಾಜ್ ರಾಯರೆಡ್ಡಿ, ಶ್ರೀ ಕೆ.ಆರ್. ರಮೇಶ್‌ಕುಮಾರ್, ಶ್ರೀ ಜಿ.ಎ. ಶ್ರೀರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್ ಹಾಗೂ ಇತರರು ನನಗೆ ನೀಡಿರುವ ಹಕ್ಕುಚ್ಯುತಿ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಿಳಿಸಬಯಸುತ್ತೇನೆ.

1) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಿಯಮಾವಳಿಗಳ ನಿಯಮ 241ರ ಮೇರೆಗೆ ಸರ್ಕಾರಿ ವಿದೇಯಕಗಳ ಮತ್ತು ಇತರ ಕಾರ್ಯಕಲಾಪಗಳ ಹಂತ ಅಥವಾ ಹಂತಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕಾಲಾವಧಿಯ ಹಂಚಿಕೆಗೆ ಶಿಫಾರಸ್ಸು ಮಾಡುವುದು ಕಾರ್ಯಕಲಾಪಗಳ ಸಲಹಾ ಸಮಿತಿಯ ಕರ್ತವ್ಯವಾಗಿರುತ್ತದೆ. ದಿನಾಂಕ: 25.09.2006 ರಂದು ಕಾರ್ಯಕಲಾಪಗಳ ಪಟ್ಟಿಯ ರೀತ್ಯಾ ಸಂತಾಪ ಸೂಚನೆ ನಂತರ ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ಸಭೆಯನ್ನು ಕರೆದು ಸದನದ ಕಾರ್ಯಕಲಾಪಗಳನ್ನು ನಡೆಸುವ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

2) ಕರ್ನಾಟಕ ವಿಧಾನ ಸಭೆಯ ನಿಯಮಾವಳಿಗಳ ನಿಯಮ 2, ಅರ್ಥ ಮತ್ತು ವಿವರಣೆಯಲ್ಲಿ ವಿಧಾನ ಸಭಾ ಕಾರ್ಯಲಯ ವಿಧಾನ ಮಂಡಲ ಸಚಿವಾಲಯ ಸಂಬಂಧಿಸಿದಂತೆ ಈ ಕೆಳಕಂಡಂತೆ ಉಲ್ಲೇಖಿತವಾಗಿದೆ.

"ವಿಧಾನ ಸಭಾ ಸಚಿವಾಲಯ" ಎಂದರೆ ಬೆಂಗಳೂರಿನಲ್ಲಿರುವ ಸಚಿವಾಲಯ ಹಾಗೂ ತಾತ್ಕಾಲಿಕವಾಗಿ ಬೆಂಗಳೂರಿನ ಹೊರಗಿನ ಯಾವುದೇ ಸ್ಥಳದಲ್ಲಿ ಅಥವಾ

ಅಧ್ಯಕ್ಷರ ಆದೇಶದ ಮೇರೆಗೆ ವ್ಯವಸ್ಥೆ ಮಾಡಲಾಗುವ ಯಾವುದೇ ಬಿಡಾರದ (ಮೊಕ್ಕಾಂ) ಕಛೇರಿಯೂ ಒಳಗೊಳ್ಳುತ್ತದೆ: ಅದರಂತೆ ಬೆಳಗಾವಿಯಲ್ಲಿ ವಿಧಾನ ಸಭಾ ಸಚಿವಾಲಯವನ್ನು ತಾತ್ಕಾಲಿಕವಾಗಿ ತೆರೆಯಲಾಗಿದೆ.

3) ದಿನಾಂಕ: 16.09.2006 ರಂದು ನಿಯಮಾವಳಿಗಳ ನಿಯಮ 3ರ ಮೇರೆಗೆ ಹೊರಡಿಸಲಾಗಿರುವ ಆಹ್ವಾನ ಪತ್ರದಲ್ಲಿ ಕರ್ನಾಟಕ ಘನತೆವೆತ್ತ ರಾಜ್ಯಪಾಲರು ಭಾರತ ಸಂವಿಧಾನ 174ನೇ ಅನುಚ್ಛೇದ (1)ನೇ ಕಂಡದ ಮೇರೆಗೆ ದಿನಾಂಕ: 25.09.2006 ರಂದು ಅಪರಾಹ್ನ 12.30 ಘಂಟೆಗೆ ಬೆಳಗಾವಿ ನಗರದಲ್ಲಿರುವ ಡಾ. ಬಿ.ಎಸ್. ಜೀರಿಗೆ ಹಾಲ್‌ನಲ್ಲಿ ಸೇರಲು ಆದೇಶಿಸಿರುವರೆಂದು ತಿಳಿಸಲಾಗಿದೆ. ಅದರಂತೆ 25.09.2006 ರಿಂದ 29.09.2006 ರವರೆಗೆ ವಿಧಾನ ಸಭಾ ಅಧಿವೇಶನ ಕಾರ್ಯಕಲಾಪಗಳ ತಾತ್ಕಾಲಿಕ ಪಟ್ಟಿಯನ್ನು ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

4) ಅಧಿವೇಶನದ ಆಹ್ವಾನ ಪತ್ರದ ಪ್ರತಿಯನ್ನು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಎಲ್ಲಾ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದೆ.

5) ಭಾರತ ಸಂವಿಧಾನ ಅನುಚ್ಛೇದ 180(1) ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಅಥವಾ ಅಧ್ಯಕ್ಷ ಪದ ಕರ್ತವ್ಯಗಳನ್ನು ನೆರವೇರಿಸಲು ಉಪಾಧ್ಯಕ್ಷನ ಅಥವಾ ಇತರ ವ್ಯಕ್ತಿಯ ಅಧಿಕಾರದ ಬಗ್ಗೆ ಉಲ್ಲೇಖಿಸುತ್ತದೆ. ಆದುದರಿಂದ ಮಾನ್ಯ ತೋಟಗಾರಿಕೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಅಧಿಕಾರದ ಮೇರೆಗೆ ದಿನಾಂಕ: 19.09.2006 ರಂದು ಸಭೆ ನಡೆಸಿರುತ್ತಾರೆ ಹೊರತು ಮೇಲಿನ ಸಂವಿಧಾನದ ಅನುಚ್ಛೇದಕ್ಕೆ ಸಂಬಂಧಿಸಿರುವುದಿಲ್ಲ.

6) ಭಾರತ ಸಂವಿಧಾನ ಅನುಚ್ಛೇದ 187ರಲ್ಲಿ ರಾಜ್ಯ ವಿಧಾನ ಮಂಡಲದ ಸಚಿವಾಲಯದ ಕುರಿತು ಉಲ್ಲೇಖಿಸಲಾಗಿದೆ. ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಯವರು ಜಿಲ್ಲಾಡಳಿತ ಪರವಾಗಿ ಅಧಿವೇಶನಕ್ಕೆ ಆಗಮಿಸಲಿರುವ ಮಾನ್ಯ ಸದಸ್ಯರುಗಳಿಗೆ ಅಲ್ಲಿ ಮಾಡಲಾಗಿರುವ ವ್ಯವಸ್ಥೆಯನ್ನು ತಿಳಿಸಿ ಸ್ವಾಗತವನ್ನು ಬಯಸಿರುತ್ತಾರೆ ವಿನಹ ವಿಧಾನ ಸಭೆಯ ಸಚಿವಾಲಯದ ಕಾರ್ಯವನ್ನು ನಿರ್ವಹಿಸಿರುವುದಿಲ್ಲ. ಸಂವಿಧಾನಾತ್ಮಕವಾಗಿ ಹಾಗೂ ನಿಯಮಾವಳಿಗೆ ಅನ್ವಯವಾಗಿ ಅಧಿವೇಶನವನ್ನು ಕರೆದು ನಡೆಸಲಾಗುತ್ತಿರುವುದರಿಂದ ಹಕ್ಕುಚ್ಯುತಿಯಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದುದರಿಂದ ಹಕ್ಕುಚ್ಯುತಿ ಸೂಚನೆಯನ್ನು ಅಂಗೀಕರಿಸಲು ನಿರಾಕರಿಸಿದ್ದೇನೆಂದು ಈ ಮೂಲಕ ತಿಳಿಸಬಯಸುತ್ತೇನೆ.